# ಅಧಿಸೂಚನೆ

ಸಂಖ್ಯೆ: ಕೆಇಆರ್ ಸಿ / ಆರ್ಓಇ / ಡಿಡಿಡಿ / 03 / 2019-20 / 1200 ಬೆಂಗಳೂರು, ದಿನಾಂಕ 01.01.2020.

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹತ್ತನೇ ತಿದ್ದುಪಡಿ) ವಿನಿಯಮಗಳು, 2020.**

**ಪೀಠಿಕೆ**

ವಿದ್ಯುಚ್ಛಕ್ತಿ ಅಧಿನಿಯಮ 2003 ರ ಪರಿಚ್ಛೇದ 46ರಲ್ಲಿ, ಸೂಕ್ತ ವಿನಿಯಮಗಳ ಮೂಲಕ, ಪರಿಚ್ಛೇದ 43ರ ಅನುಸಾರ ವಿದ್ಯುತ್ ಪೂರೈಕೆ ಅಗತ್ಯವಿರುವ ವ್ಯಕ್ತಿಯಿಂದ ಆ ಪೂರೈಕೆಯನ್ನು ನೀಡುವ ಉದ್ದೇಶಕ್ಕಾಗಿ ಬಳಸಲಾಗುವ ಯಾವುದೇ ವಿದ್ಯುತ್ ಮಾರ್ಗ ನಿರ್ಮಾಣಕ್ಕಾಗಿ ಅಥವಾ ಉಪಕರಣಗಳನ್ನು ಅಳವಡಿಸಲು ತಗುಲಿದ ವೆಚ್ಚವನ್ನು ಸಮಂಜಸವಾಗಿ ವಸೂಲಿ ಮಾಡಲು ವಿತರಣಾ ಪರವಾನಿಗೆದಾರನಿಗೆ ಅವಕಾಶ ನೀಡಲು, ರಾಜ್ಯ ಆಯೋಗವು ಅಧಿಕಾರ ಹೊಂದಿದ್ದು, ಸದರಿ ಅಧಿಕಾರಗಳ ಮೂಲಕ ಆಯೋಗವು ಅಧಿನಿಯಮದ ಪರಿಚ್ಛೇದ 181 ರ ಜೊತೆಗೆ ಓದಿದಂತೆ "**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಾತಿ) ವಿನಿಯಮಗಳು, 2004**" ಅನ್ನು ಸೂಚಿಸಿದೆ, ಹಾಗೂ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿದೆ. [ಕವಿನಿಆ (ಆರ್ ಓ ಇ) ವಿನಿಯಮಗಳು, 2004]

ಅಭಿವೃದ್ಧಿದಾರರು, ಮೂಲ ಸೌಕರ್ಯ ಒದಗಿಸದೆ, ವಿದ್ಯುತ್ ಮಾರ್ಗಗಳನ್ನು ನಿರ್ಮಿಸದೆ, ಅಥವಾ ಉಪಕರಣಗಳನ್ನು ಅಳವಡಿಸದೇ ಅಭಿವೃದ್ಧಿದಾರರಿಂದ ಉಪೇಕ್ಷಿಸಲ್ಪಟ್ಟಂತಹ ಬಡಾವಣೆಗಳಲ್ಲಿ ಕೆಇಆರ್ ಸಿ (ಆರ್ ಒಇ) ವಿನಿಯಮಗಳು, 2004 ರ ಖಂಡ 3.2.3 ರಲ್ಲಿ ಸೂಚಿಸಿದಂತೆ ವಸೂಲಿಮಾಡಬೇಕಾದ ವೆಚ್ಚಗಳನ್ನು 2004 ರಲ್ಲಿ ಚಾಲ್ತಿಯಲ್ಲಿದ್ದ ದರಗಳ ಅನುಸೂಚಿಯ ಆಧಾರದ ಮೇಲೆ ಪಡೆಯಲಾಗುತ್ತಿದ್ದು ಮತ್ತು ಇಲ್ಲಿಯವರೆಗೆ ಪರಿಷ್ಕರಿಸಲಾಗಿರುವುದಿಲ್ಲ. ಅಂದಿನಿಂದ ಮೂಲಸೌಕರ್ಯ ಸಾಮಗ್ರಿಗಳ ವೆಚ್ಚದಲ್ಲಿ ಗಣನೀಯ ಹೆಚ್ಚಳವಾಗಿರುತ್ತದೆ. ವಿದ್ಯುತ್ ಮಾರ್ಗ / ಉಪಕರಣಗಳ ಅಳವಡಿಕೆಗೆ ತಗಲುವ ವೆಚ್ಚವನ್ನು ವಸೂಲಿ ಮಾಡುವ ಸಲುವಾಗಿ ಈ ವಿನಿಯಮಗಳಲ್ಲಿ ನಿಗದಿಪಡಿಸಿರುವ ಕಡಿಮೆ ಬೆಲೆಯಿಂದ ಹಣದ ನಷ್ಟವುಂಟಾಗುತ್ತಿರುವುದರಿಂದ ಈಗ, ಆರ್ ಓ ಇ ನಲ್ಲಿನ ಖಂಡ 3.2.3 ಕ್ಕೆ ತಿದ್ದುಪಡಿ ಕೋರಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, (ಸೆಸ್ಕ್) ಮೈಸೂರು ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, (ಬೆಸ್ಕಾಂ) ಕ್ರಮವಾಗಿ ಒಪಿ 63 / 2018 ಮತ್ತು ಒಪಿ 85 / 2018 ಆಯೋಗದ ಮುಂದೆ ಅರ್ಜಿಗಳನ್ನು

ಸಲ್ಲಿಸಿವೆ. ಆಯೋಗವು ಎರಡೂ ಅರ್ಜಿಗಳನ್ನು ಆಲಿಸಿದ ನಂತರ, ಭಾಗೀದಾರರೊಂದಿಗೆ ಸಮಾಲೋಚಿಸಿ ಪ್ರಸ್ತಾವನೆಯನ್ನು ಪರಿಶೀಲಿಸುವಂತೆ ಕಛೇರಿಗೆ ಸೂಚನೆ ನೀಡುವುದರ ಮೂಲಕ ಅರ್ಜಿಗಳನ್ನು ವಿಲೇವಾರಿ ಮಾಡಿರುತ್ತದೆ.

ಇದಲ್ಲದೆ, ಒಪಿ 63 / 2018 ಮತ್ತು ಒಪಿ 85 / 2018 ರಲ್ಲಿನ ಆಯೋಗದ ನಿರ್ಧಾರದ ಆಧಾರದ ಮೇಲೆ, ವೆಚ್ಚ ವಸೂಲಾತಿಯ ಖಂಡ 3.2.3 ರಲ್ಲಿ ನಿಗದಿಪಡಿಸಲಾದ ವಸೂಲಿ ಮಾಡಬೇಕಾದ ವೆಚ್ಚವನ್ನು ಪರಿಷ್ಕರಿಸಲು ಇತರ ಎಸ್ಕಾಂಗಳಿಂದ ಪ್ರಸ್ತಾಪಗಳನ್ನು ಸ್ವೀಕರಿಸಲಾಗಿರುತ್ತದೆ.

ಚಾಲ್ತಿಯಲ್ಲಿರುವ ದರಗಳ ಅನುಸೂಚಿಯ ಅನುಸಾರವಾಗಿ ಎಸ್ಕಾಂಗಳು ಸಲ್ಲಿಸಿದ ಪ್ರಸ್ತಾವಿತ ವೆಚ್ಚದ ಅಂದಾಜುಗಳ ಆಧಾರದ ಮೇಲೆ, ಆಯೋಗವು ಪ್ರಸ್ತುತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳ ಕೆಲವು ಖಂಡಗಳಿಗೆ ತಿದ್ದುಪಡಿಗಳನ್ನು ತರುವುದು ಸೂಕ್ತವೆಂದು ಪರಿಗಣಿಸಿದೆ. ಎಸ್ಕಾಂಗಳು ಸಲ್ಲಿಸಿದ ವೆಚ್ಚದ ಅಂದಾಜಿನ ಪ್ರಕಾರ ಪ್ರತಿ ಕಿ.ವ್ಯಾ ನ ವೆಚ್ಚ ಮತ್ತು ಪ್ರತಿ ಸೈಟ್‌ನ ವೆಚ್ಚವು ವಿವಿಧ ಎಸ್ಕಾಂಗಳಿಗೆ ವಿಭಿನ್ನವಾಗಿರುತ್ತದೆ. ಆಯೋಗವು ಎಲ್ಲಾ ಎಸ್ಕಾಂಗಳು ಸಲ್ಲಿಸಿದ ಅಂದಾಜುಗಳ ಸರಾಸರಿ ವೆಚ್ಚದ ಆಧಾರದ ಮೇಲೆ ಒಂದು ಅಂಕಿಅಂಶವನ್ನು ಗೊತ್ತುಪಡಿಸಿತು ಮತ್ತು ತಿದ್ದುಪಡಿ ಮಾಡಬೇಕಾದ ಕರಡು ವಿನಿಯಮಗಳನ್ನು ಪ್ರಕಟಿಸಿತು.

ಆದ್ದರಿಂದ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಾತಿ) ವಿನಿಯಮ 2004 ರ ತಿದ್ದುಪಡಿಯ ಕರಡುಗಳನ್ನು (ಹತ್ತನೇ ತಿದ್ದುಪಡಿ ಎಂದು ಕರೆಯಲು ಪ್ರಸ್ತಾಪಿಸಲಾಗಿದೆ) ಅಧಿಸೂಚನೆ ಸಂಖ್ಯೆ: ಕೆ.ಇ.ಆರ್.ಸಿ/ಆರ್ ಒಇ/ಡಿಡಿಡಿ/03/2019-20/497, ಬೆಂಗಳೂರು, ದಿನಾಂಕ: 29.07.2019 ಅನ್ನು ದಿನಾಂಕ 13.08.2019 ರಂದು ಕರ್ನಾಟಕದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿ, ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗೆ ಭಾಗೀದಾರರಿಂದ ಸಲಹೆಗಳು / ಅಭಿಪ್ರಾಯಗಳು / ಆಕ್ಷೇಪಣೆಗಳನ್ನು ಆಹ್ವಾನಿಸಿತು. ಆಯೋಗದ ವೆಬ್‌ಸೈಟ್ https://karunadu.karnataka.gov.in/kerc ನಲ್ಲಿಯೂ ತಿದ್ದುಪಡಿಗಳ ಕರಡು ಪ್ರತಿಗಳನ್ನು ಲಭ್ಯವಿರಿಸಲಾಯಿತು ಮತ್ತು ಇದನ್ನು ತಿಳಿಸುವ ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ಸಾರ್ವಜನಿಕರ / ಆಸಕ್ತರ ಮಾಹಿತಿಗಾಗಿ ಪ್ರಕಟಿಸಲಾಯಿತು. ಆಯೋಗದಲ್ಲಿ ಭಾಗೀದಾರರಿಂದ ಸಲಹೆಗಳು / ಅಭಿಪ್ರಾಯಗಳು / ಆಕ್ಷೇಪಣೆಗಳನ್ನು ಸ್ವೀಕರಿಸಲಾಯಿತು. ಆಯೋಗವು ದಿನಾಂಕ 25.09.2019 ರಂದು ಈ ವಿಷಯವಾಗಿ 'ಸಾರ್ವಜನಿಕ ವಿಚಾರಣೆ' ಯನ್ನು ನಡೆಸಿತು.

ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿದ ಭಾಗೀದಾರರು, ಮುಖ್ಯವಾಗಿ ಕೆಲವು ಭಿನ್ನಾಭಿಪ್ರಾಯಗಳೊಂದಿಗೆ ಕರಡು ತಿದ್ದುಪಡಿಗಳಲ್ಲಿ ಪ್ರಸ್ತಾಪಿಸಲಾದ ದರಗಳ ಬಗ್ಗೆ

ಕಾಳಜಿಯನ್ನು ವ್ಯಕ್ತಪಡಿಸಿದರು. ಸಮಂಜಸವಾದ ದರಗಳನ್ನು ನಿಗದಿಪಡಿಸುವಂತೆ ಭಾಗೀದಾರರು ನೀಡಿದ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲಾದ ದರಗಳನ್ನು ಮರು ಪರಿಶೀಲಿಸುವಂತೆ ಆಯೋಗವು ಕಚೇರಿಗೆ ನಿರ್ದೇಶನ ನೀಡಿತು. ವಿವಿಧ ಭೌಗೋಳಿಕ ಸ್ಥಳಗಳಲ್ಲಿರುವ ವಿವಿಧ ನಿವೇಶನಗಳಿಗೆ ನಿಗದಿಯಾದ ದರಗಳ ಮರುಪರಿಶೀಲನೆಗಾಗಿ, ಮತ್ತೊಮ್ಮೆ ಎಲ್ಲಾ ಎಸ್ಕಾಂಗಳ ವಿವಿಧ ಒ & ಎಂ ವಿಭಾಗಗಳಿಂದ ಇನ್ನೂ ಕೆಲವು ಮಂಜೂರಾದ ಅಂದಾಜುಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಯಿತು. ಹೀಗೆ ಸಿದ್ಧಪಡಿಸಿದ ವಿಶ್ಲೇಷಣೆಯನ್ನು 13.12.2019 ರಂದು ನಡೆದ ಸಭೆಯಲ್ಲಿ ಆಯೋಗದ ಮುಂದೆ ಮಂಡಿಸಲಾಯಿತು. ನಗರ ಪ್ರದೇಶಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಮಾರ್ಗಗಳ ಸ್ಥಾಪನೆಗೆ ವಿವಿಧ ರೀತಿಯ ವಾಹಕಗಳನ್ನು ಬಳಸಲಾಗುತ್ತಿದೆ, ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಳವಡಿಸಿಕೊಳ್ಳಲಾದ ಅಂತರದ ವ್ಯಾಪ್ತಿಯಲ್ಲಿನ (ಕಂಬಗಳ ನಡುವಿನ ಅಂತರ) ವ್ಯತ್ಯಾಸ ಇತ್ಯಾದಿಗಳು ವಿಶ್ಲೇಷಣೆಯಿಂದ ಬಹಿರಂಗವಾಯಿತು. ಪ್ರತಿ ಕೆ.ಡಬ್ಲ್ಯೂಗೆ ತಗಲುವ ವೆಚ್ಚದಲ್ಲಿನ ವ್ಯತ್ಯಾಸಕ್ಕೆ ಇತರ ಕಾರಣಗಳು, ಬಡಾವಣೆಗಳ ಗಾತ್ರ, ನಿವೇಶನಗಳ ಸಂಖ್ಯೆ, ಬಡಾವಣೆಯ ಸ್ಥಳ, ಕಂಬಗಳ ಮಾದರಿ, ಹೆಚ್‌ಟಿ ಮತ್ತು ಎಲ್‌ಟಿ ಮಾರ್ಗಗಳ ಉದ್ದ, ವಾಹಕಗಳ ಮಾದರಿ, ಅಂದರೆ ಓಎಚ್ ಅಥವಾ ಯುಜಿ, ಬಳಸಲಾದ ಓಎಚ್ ಮತ್ತು ಯುಜಿ ವಾಹಕದ ಗಾತ್ರ, ಬಳಸಿದ ವಿತರಣಾ ಪರಿವರ್ತಕಗಳ ಸಂಖ್ಯೆ, ಬಳಸಿದ ವಿತರಣಾ ಪರಿವರ್ತಕಗಳ ಸಾಮರ್ಥ್ಯ, ಸಂಬಂಧಿತ ಬಿಡಿಭಾಗಗಳು, ಅಂದರೆ ಬೀದಿ ದೀಪಗಳು ಮತ್ತು ನೀರಿನ ಪಂಪ್‌ಗಳು, ಇತ್ಯಾದಿಗಳ ಮೇಲೆ ಅವಲಂಬಿಸಿರುತ್ತದೆ.

ಆಯೋಗವು ಭಾಗೀದಾರರ ಮನವಿ ಮತ್ತು ಸಲಹೆಗಳು / ಅಭಿಪ್ರಾಯಗಳು / ಆಕ್ಷೇಪಣೆಗಳನ್ನು ಪರಿಗಣಿಸಿ, ಪರಿಷ್ಕೃತ ವಿಶ್ಲೇಷಣೆಯನ್ನು ಮರುಪರಿಶೀಲಿಸಿದ ನಂತರ, 2003ರ ವಿದ್ಯುಚ್ಛಕ್ತಿ ಅಧಿನಿಯಮದ, ಪರಿಚ್ಛೇದ 181ರ ಜೊತೆಗೆ ಓದಲಾದ ಪರಿಚ್ಛೇದ 46, ಪರಿಚ್ಛೇದ 43ರ ಉಪ ಪರಿಚ್ಛೇದ (2), ರಡಿ ಪ್ರದತ್ತವಾದ ಅಧಿಕಾರ ಹಾಗೂ ಈ ಸಂಬಂಧ ದತ್ತವಾದ ಎಲ್ಲಾ ಅಧಿಕಾರವನ್ನು ಚಲಾಯಿಸಿ, ಆಯೋಗವು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳು, 2004 ಕ್ಕೆ ಮತ್ತಷ್ಟು ತಿದ್ದುಪಡಿಗಳನ್ನು ಈ ಕೆಳಗಿನಂತೆ ಮಾಡಿರುತ್ತದೆ:

**1. ಶೀರ್ಷಿಕೆ ಮತ್ತು ಪ್ರಾರಂಭ:**

a) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹತ್ತನೇ ತಿದ್ದುಪಡಿ) ವಿನಿಯಮಗಳು 2020 ಎಂಬುದಾಗಿ ಕರೆಯಬಹುದಾಗಿರುತ್ತದೆ.

b) ಈ ವಿನಿಯಮಗಳು, ಕರ್ನಾಟಕ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಮತ್ತು ತದ ನಂತರ ವಿದ್ಯುಚ್ಛಕ್ತಿ ಸರಬರಾಜಿಗೆ ಅನುಮೋದನೆ ನೀಡಲ್ಪಡುವ ವಿದ್ಯುಚ್ಛಕ್ತಿ ಅರ್ಜಿದಾರರಿಗೆ ಅನ್ವಯಿಸುವಂತೆ ಜಾರಿಗೆ ಬರಲಿದೆ.

c) ಈ ವಿನಿಯಮಗಳು ಸಂಪೂರ್ಣ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗಲಿದೆ.

**2. ಕೆಲವು ಷರತ್ತುಗಳ ತಿದ್ದುಪಡಿ:**

2004 ರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳಲ್ಲಿನ, ಕೆಳಗಿನ ಕೋಷ್ಟಕದ ಕಲಂ-2 ರಲ್ಲಿ ಉಲ್ಲೇಖಿಸಲಾದ ಅಸ್ತಿತ್ವದಲ್ಲಿರುವ ವಿನಿಯಮಗಳನ್ನು ಕಲಂ-3 ರಲ್ಲಿ ಉಲ್ಲೇಖಿಸಲಾದ ವಿನಿಯಮಗಳಂತೆ ಬದಲಿಸಬೇಕು:

| 1 | 2 | 3 |
|---|---|---|
| **ಷರತ್ತು ಸಂಖ್ಯೆ:** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| **2**<br>**2 (b) (a)** | **ವ್ಯಾಖ್ಯಾನ**<br>ಹೊಸತು | **ವ್ಯಾಖ್ಯಾನ**<br>"**ಬಿಡಿಎ**" – ಅಂದರೆ, 1976 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ, ಪರಿಚ್ಛೇದ 2 (ಎ) ಅಡಿಯಲ್ಲಿ ವ್ಯಾಖ್ಯಾನಿಸಲಾಗಿರುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ; |
| **2 (b) (b)** | ಹೊಸತು | "**ಬಿಎಮ್ಆರ್‌ಡಿಎ**" ಎಂದರೆ, 1985 ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ, ಪರಿಚ್ಛೇದ 2 (ಎ) ಅಡಿಯಲ್ಲಿ ವ್ಯಾಖ್ಯಾನಿಸಲಾಗಿರುವಂತೆ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ,; |
| **2 (b) (c)** | ಹೊಸತು | "**ನಗರ**" ಎಂದರೆ, ಪರಿಚ್ಛೇದ 3 ರ ಅಡಿಯಲ್ಲಿ ಒಂದು ದೊಡ್ಡ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸಲಾದ ಯಾವುದೇ ಸ್ಥಳೀಯ ಪ್ರದೇಶ ಮತ್ತು 1976 ರ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ಸ್ ಅಧಿನಿಯಮದ, ಪರಿಚ್ಛೇದ (2) (4) ರ ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ, ಅಂತಹ ಪ್ರದೇಶದ ಪರಿಮಿತಿಯ ವಿಸ್ತರಣೆ, ಸಂಕೋಚನ ಅಥವಾ ಬದಲಾವಣೆಗಳಿಗೆ ಒಳಪಡಿಸಬಹುದಾದ ಪ್ರದೇಶವೆಂದು ಪರಿಗಣಿಸಲಾಗುತ್ತದೆ; |
| **2 (b) (d)** | ಹೊಸತು | "**ನಗರ ಮುನ್ಸಿಪಲ್ ಕಾರ್ಪೊರೇಷನ್**" – ಅಂದರೆ, ಪರಿಚ್ಛೇದ (2) (4) ರ ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ ಮತ್ತು 1964 ರ ಕರ್ನಾಟಕ ಪುರಸಭೆಗಳ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ನಗರ ಮುನ್ಸಿಪಲ್ ಕೌನ್ಸಿಲ್; |

| 1 | 2 | 3 |
|---|---|---|
| **ಷರತ್ತು ಸಂಖ್ಯೆ:** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| **2 (c) (a)** | ಹೊಸತು | "**ನಿಗಮ**" – ಅಂದರೆ, 1976 ರ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ಸ್ ಅಧಿನಿಯಮದ, ಪರಿಚ್ಛೇದ (2) (6) ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ ಸ್ಥಾಪಿಸಲಾದ ನಿಗಮ; |
| **2 (c) (b)** | ಹೊಸತು | "**ಅಭಿವೃದ್ಧಿ ಪ್ರಾಧಿಕಾರ**" – ಅಂದರೆ, ಪರಿಚ್ಛೇದ (2) (ಎ) ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ ಮತ್ತು 1987 ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ, ಪರಿಚ್ಛೇದ 3 ರ ಅಡಿಯಲ್ಲಿ ರಚಿಸಲಾದ ನಗರಾಭಿವೃದ್ಧಿ ಪ್ರಾಧಿಕಾರ; |
| **2 (g) (a)** | ಹೊಸತು | "**ಗ್ರಾಮ ಪಂಚಾಯತ್**" ಅಂದರೆ, ಪರಿಚ್ಛೇದ (2) (15) ರ ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ ಮತ್ತು 1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ, ಅಡಿಯಲ್ಲಿ ಸ್ಥಾಪಿಸಲಾದ ಗ್ರಾಮ ಪಂಚಾಯತಿ; |
| **2 (r)** | ಹೊಸತು | "**ಟೌನ್ ಮುನ್ಸಿಪಲ್ ಕಾರ್ಪೊರೇಷನ್**" – ಅಂದರೆ, ಪರಿಚ್ಛೇದ (2) (28) ರ ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ ಮತ್ತು 1964 ರ ಕರ್ನಾಟಕ ಪುರಸಭೆಗಳ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಪಟ್ಟಣ ಪುರಸಭೆ; |
| **2 (s)** | ಹೊಸತು | "**ಪಟ್ಟಣ ಪಂಚಾಯತ್**" – ಅಂದರೆ, ಪರಿಚ್ಛೇದ (2) (28 ಎ) ರ ಅಡಿಯಲ್ಲಿ ವ್ಯಾಖ್ಯಾನಿಸಲಾದಂತೆ ಮತ್ತು 1964 ರ ಕರ್ನಾಟಕ ಪುರಸಭೆಗಳ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಪಟ್ಟಣ ಪಂಚಾಯತ್; |
| **3.2.3** | ಅಭಿವೃದ್ಧಿದಾರರ ಕಡೆಯಿಂದ ಉಪೇಕ್ಷಿಸಲ್ಪಟ್ಟ ಮತ್ತು ಅಭಿವೃದದಿದಾರರು ವಿದ್ಯುತ್ ಮಾರ್ಗ / ಉಪಕರಣಗಳನ್ನು ಸ್ಥಾಪಿಸದೇ ಇರುವ ಲೇಔಟ್‌ಗಳ ಸಂದರ್ಭದಲ್ಲಿ, ವಿತರಣಾ ಪರವಾನಗಿದಾರರು ಈ ಕೆಳಗಿನಂತೆ ವಿದ್ಯುತ್ ಮಾರ್ಗ / ಉಪಕರಣಗಳನ್ನು ಸ್ಥಾಪಿಸಲು ತಗಲುವ ವೆಚ್ಚವನ್ನು ವಸೂಲಿ ಮಾಡಬಹುದಾಗಿರುತ್ತದೆ: | ಯಾವುದೇ ಬದಲಾವಣೆ ಇಲ್ಲ. |
| **3.2.3 (i)** | ಬೆಂಗಳೂರು ಮಹಾನಗರ ಪಾಲಿಕೆ, ಬಿ.ಡಿ.ಎ. ಮತ್ತು ಅದರ ಒಟ್ಟುಗೂಡಿದ ಪ್ರದೇಶ ಮತ್ತು ಮೈಸೂರು, ಮಂಗಳೂರು, ಹುಬ್ಬಳ್ಳಿ, ಗುಲ್ಬರ್ಗ ಮತ್ತು ಬೆಳಗಾವಿ ನಗರ ಪಾಲಿಕೆಗಳು ಮತ್ತು ಅದರ ಒಟ್ಟುಗೂಡಿದ ಪ್ರದೇಶಗಳಲ್ಲಿ ಬರುವ ನಿವೇಶನಗಳಿಗೆ; | ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಮತ್ತು ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಕಲಬುರ್ಗಿ, ಬೆಳಗಾವಿ, ಬಳ್ಳಾರಿ, ದಾವಣಗೆರೆ ಶಿವಮೊಗ್ಗ, ತುಮಕೂರು, ಮತ್ತು ವಿಜಯಪುರ ನಗರಗಳಲ್ಲಿ ಬರುವ ನಿವೇಶನಗಳಿಗೆ ಸಂಬಂಧಿಸಿದಂತೆ. |

| 1 | 2 | 3 |
|---|---|---|
| **ಷರತ್ತು ಸಂಖ್ಯೆ:** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| **3.2.3 (i) (a)** | 1,200 ಚದರ ಅಡಿ ಮತ್ತು ಅದಕ್ಕಿಂತ ಕಡಿಮೆ ಆಯಾಮಗಳನ್ನು ಹೊಂದಿರುವ ನಿವೇಶನಗಳಿಗೆ, ಪ್ರತಿ ನಿವೇಶನಕ್ಕೆ ಕನಿಷ್ಟ ರೂ.4,000 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.4,000. | 1,200 ಚದರ ಅಡಿ ಮತ್ತು ಅದಕ್ಕಿಂತ ಕಡಿಮೆ ಆಯಾಮಗಳನ್ನು ಹೊಂದಿರುವ ನಿವೇಶನಗಳಿಗೆ, ವಿದ್ಯುತ್ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು, ಓವರ್ ಹೆಡ್ (ಒಎಚ್) ಮಾರ್ಗಗಳನ್ನು ಅಳವಡಿಸುವಲ್ಲಿ ಪ್ರತಿ ನಿವೇಶನಕ್ಕೆ ಕನಿಷ್ಟ ರೂ.6,500 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ. 6,500 ಮತ್ತು ಭೂಗತ (ಯುಜಿ) ಕೇಬಲ್ ಗಳನ್ನು ಅಳವಡಿಸುವಲ್ಲಿ ನಿವೇಶನಕ್ಕೆ ಕನಿಷ್ಟ ರೂ.16,750 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.16,750. |
| **3.2.3 (i) (b)** | 1,200 ಚದರ ಅಡಿಗಿಂತ ಹೆಚ್ಚಿನ ಆಯಾಮಗಳನ್ನು ಹೊಂದಿರುವ ನಿವೇಶನಗಳಿಗೆ, ಪ್ರತಿ ನಿವೇಶನಕ್ಕೆ ಕನಿಷ್ಟ ರೂ.12,000 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.4,000. | 1,200 ಚದರ ಅಡಿಗಿಂತ ಹೆಚ್ಚಿನ ಆಯಾಮಗಳನ್ನು ಹೊಂದಿರುವ ನಿವೇಶನಗಳಿಗೆ, ವಿದ್ಯುತ್ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು, ಓವರ್ ಹೆಡ್ (ಒಎಚ್) ಮಾರ್ಗಗಳನ್ನು ಅಳವಡಿಸುವಲ್ಲಿ ಪ್ರತಿ ನಿವೇಶನಕ್ಕೆ ಕನಿಷ್ಟ ರೂ.19,500 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ. 6,500 ಮತ್ತು ಭೂಗತ (ಯುಜಿ) ಕೇಬಲ್ ಗಳನ್ನು ಅಳವಡಿಸುವಲ್ಲಿ ನಿವೇಶನಕ್ಕೆ ಕನಿಷ್ಟ ರೂ.50,250 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.16,750. |
| **3.2.3 (ii)** | ಸ್ಥಳೀಯ / ಅಭಿವೃದ್ಧಿ ಪ್ರಾಧಿಕಾರದಿಂದ ಗುರುತಿಸಲ್ಪಟ್ಟಿರುವ ಇತರ ನಗರ, ಪಟ್ಟಣ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಬರುವ ನಿವೇಶನಗಳಿಗೆ, ಪ್ರತಿ ನಿವೇಶನಕ್ಕೆ ಕನಿಷ್ಟ ರೂ.4,000 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.4,000. | 3.2.3 (ii) (a) ಮತ್ತು 3.2.3 (ii) (b) ಎಂದು ಮಾರ್ಪಡಿಸಲಾಗಿದೆ. |
| **3.2.3 (ii) (a)** | ಹೊಸತು | ಸ್ಥಳೀಯ ಪ್ರಾಧಿಕಾರ (ಅಭಿವೃದ್ಧಿ ಪ್ರಾಧಿಕಾರ) ದಿಂದ ಗುರುತಿಸಲ್ಪಟ್ಟ, ನಗರ ಪ್ರದೇಶಗಳು / ಕಾರ್ಪೊರೇಶನ್ ಪ್ರದೇಶಗಳು / ನಗರ ಮುನ್ಸಿಪಲ್ ಕಾರ್ಪೊರೇಶನ್ ಪ್ರದೇಶಗಳು, ಟೌನ್ ಮುನ್ಸಿಪಲ್ ಕಾರ್ಪೊರೇಶನ್ ಮಿತಿಗಳಲ್ಲಿ / ಪಟ್ಟಣ ಪಂಚಾಯತ್ ಮಿತಿಯಲ್ಲಿ, 1,200 ಚದರ ಅಡಿ ಮತ್ತು ಅದಕ್ಕಿಂತ ಕಡಿಮೆ ಆಯಾಮಗಳನ್ನು ಹೊಂದಿರುವ ನಿವೇಶನಗಳಿಗೆ, ವಿದ್ಯುತ್ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು, ಓವರ್ ಹೆಡ್ (ಒಎಚ್) ಮಾರ್ಗಗಳನ್ನು ಅಳವಡಿಸುವಲ್ಲಿ ಪ್ರತಿ ನಿವೇಶನಕ್ಕೆ ಕನಿಷ್ಟ ರೂ.6,500 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ. 6,500 ಮತ್ತು ಭೂಗತ (ಯುಜಿ) ಕೇಬಲ್ / ಏರಿಯಲ್ ಬಂಚ್ಡ್ ಕೇಬಲ್‌ಗಳನ್ನು (ಎಬಿಸಿ) ಗಳನ್ನು ಅಳವಡಿಸುವಲ್ಲಿ ನಿವೇಶನಕ್ಕೆ ಕನಿಷ್ಟ ರೂ.16,750 ಗೆ |

| 1 | 2 | 3 |
|---|---|---|
| **ಷರತ್ತು ಸಂಖ್ಯೆ:** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| | | ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.16,750. |
| **3.2.3 (ii) (b)** | ಹೊಸತು | ಸ್ಥಳೀಯ ಪ್ರಾಧಿಕಾರ (ಅಭಿವೃದ್ಧಿ ಪ್ರಾಧಿಕಾರ) ದಿಂದ ಗುರುತಿಸಲ್ಪಟ್ಟ, ನಗರ ಪ್ರದೇಶಗಳು / ಕಾರ್ಪೊರೇಶನ್ ಪ್ರದೇಶಗಳು / ನಗರ ಮುನ್ಸಿಪಲ್ ಕಾರ್ಪೊರೇಶನ್ ಪ್ರದೇಶಗಳು, ಟೌನ್ ಮುನ್ಸಿಪಲ್ ಕಾರ್ಪೊರೇಶನ್ ಮಿತಿಗಳಲ್ಲಿ / ಪಟ್ಟಣ ಪಂಚಾಯತ್ ಮಿತಿಯಲ್ಲಿ, 1,200 ಚದರ ಅಡಿಗಿಂತ ಹೆಚ್ಚಿನ ಆಯಾಮಗಳನ್ನು ಹೊಂದಿರುವ ನಿವೇಶನಗಳಿಗೆ, ವಿದ್ಯುತ್ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು, ಓವರ್ ಹೆಡ್ (ಒಎಚ್) ಮಾರ್ಗಗಳನ್ನು ಅಳವಡಿಸುವಲ್ಲಿ ಪ್ರತಿ ನಿವೇಶನಕ್ಕೆ ಕನಿಷ್ಟ ರೂ.19,500 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ. 6,500 ಮತ್ತು ಭೂಗತ (ಯುಜಿ) ಕೇಬಲ್ / ಏರಿಯಲ್ ಬಂಚ್ಡ್ ಕೇಬಲ್ ಗಳನ್ನು (ಎಬಿಸಿ) ಗಳನ್ನು ಅಳವಡಿಸುವಲ್ಲಿ ನಿವೇಶನಕ್ಕೆ ಕನಿಷ್ಟ ರೂ.50,250 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.16,750. |
| **3.2.3 (iii)** | ಪಟ್ಟಣಗಳ ಮಿತಿಯಿಂದ ಹೊರಗಿರುವ ಬಡಾವಣೆಗಳಲ್ಲಿನ, ಉಪ-ಕಲಂ 3.2.3 (i) & (ii) ರಲ್ಲಿ ಉಲ್ಲೇಖಿಸಿರುವ ಪಟ್ಟಣಗಳನ್ನು ಹೊರತುಪಡಿಸಿದಂತೆ ಇರುವ ನಿವೇಶನಗಳಿಗೆ, ಪ್ರತಿ ನಿವೇಶನಕ್ಕೆ ಕನಿಷ್ಟ ರೂ.3,000 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.3,000. | ಪಟ್ಟಣ ಪುರಸಭೆಯ ಮಿತಿಗಳು / ಪಟ್ಟಣ ಪಂಚಾಯತ್ ಮಿತಿಯಿಂದ ಹೊರಗಿರುವ ಬಡಾವಣೆಗಳಲ್ಲಿನ, ಉಪ-ಕಲಂ 3.2.3 (i) (a), 3.2.3 (i) (b), 3.2.3 (ii) (a) & 3.2.3 (ii) (b) ನಲ್ಲಿ ಉಲ್ಲೇಖಿಸಲಾದ ಪ್ರದೇಶಗಳನ್ನು ಹೊರತುಪಡಿಸಿದಂತೆ ಮತ್ತು ಗ್ರಾಮ ಪಂಚಾಯತ್ ಮಿತಿಯ ಒಳಗೆ ಬರುವ ನಿವೇಶನಗಳಿಗೆ, ಓವರ್ ಹೆಡ್ (ಒಎಚ್) ಮಾರ್ಗಗಳನ್ನು ಅಳವಡಿಸುವಲ್ಲಿ ಪ್ರತಿ ನಿವೇಶನಕ್ಕೆ ಕನಿಷ್ಟ ರೂ.5,750 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.5,750 ಮತ್ತು ಭೂಗತ (ಯುಜಿ) ಕೇಬಲ್ / ಎಬಿಸಿ ಗಳನ್ನು ಅಳವಡಿಸುವಲ್ಲಿ ನಿವೇಶನಕ್ಕೆ ಕನಿಷ್ಟ ರೂ.16,500 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.16,500. |
| **3.2.3 (iv)** | ಪರಿತ್ಯಜಿಸಲಾದ (abandoned) ಬಡಾವಣೆಗಳನ್ನು ಹೊರತುಪಡಿಸಿದಂತೆ, ಗ್ರಾಮ ವ್ಯಾಪ್ತಿಯ ಹೊರಗೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹೊರಗೆ ಬರುವ ನಿವೇಶನಗಳಿಗೆ, ಕಂದಾಯ ನಿವೇಶನಗಳು, ದಾಖಲೆಗಳಿಲ್ಲದ (Stray) ನಿವೇಶನಗಳಿಗೆ, ಪ್ರತಿ ನಿವೇಶನಕ್ಕೆ ಕನಿಷ್ಠ ರೂ.3,000 ಗಳಿಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.3,000. (ದಿನಾಂಕ 12.01.2006ರ ತಿದ್ದುಪಡಿಯಂತೆ). | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊರಗೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹೊರಗೆ ಬರುವ ನಿವೇಶನಗಳಿಗೆ, ಕಲಂ 3.2.3 (i), 3.2.3 (ii) ಮತ್ತು 3.2.3 (iii) ಮತ್ತು ಅವುಗಳ ಉಪ-ಕಲಮುಗಳು ಸೇರಿದಂತೆ ನಮೂದಿಸಲಾದ ಬಡಾವಣೆಗಳನ್ನು ಹೊರತುಪಡಿಸಿದಂತೆ, ಕಂದಾಯ ನಿವೇಶನಗಳು, ದಾರಿ ದಾಖಲೆಗಳಿಲ್ಲದ (Stray) ಇತ್ಯಾದಿ ನಿವೇಶನಗಳಿಗೆ, ಓವರ್ ಹೆಡ್ (ಒಎಚ್) ಮಾರ್ಗಗಳನ್ನು ಅಳವಡಿಸುವಲ್ಲಿ ಪ್ರತಿ ನಿವೇಶನಕ್ಕೆ ಕನಿಷ್ಟ ರೂ.5,750 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.5,750 ಮತ್ತು |

| 1 | 2 | 3 |
|---|---|---|
| **ಷರತ್ತು ಸಂಖ್ಯೆ:** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| | | ಭೂಗತ (ಯುಜಿ) ಕೇಬಲ್ / ಎಬಿಸಿ ಗಳನ್ನು ಅಳವಡಿಸುವಲ್ಲಿ ನಿವೇಶನಕ್ಕೆ ಕನಿಷ್ಠ ರೂ.16,500 ಗೆ ಒಳಪಟ್ಟಂತೆ ಕೋರಿರುವ ಪ್ರತಿ ಕಿಲೋವ್ಯಾಟ್‌ಗೆ ರೂ.16,500. |
| **3.2.3 (v)** | ಹೊಸತು | ಅಗತ್ಯವಿದ್ದಲ್ಲಿ, ಬೆಲೆ ಸೂಚ್ಯಂಕದಲ್ಲಿನ ವ್ಯತ್ಯಾಸಕ್ಕೆ ಅನುಗುಣವಾಗಿ ಬದಲಾಗುವ ದರ ಅನುಸೂಚಿಯಂತೆ (SR) ವಸೂಲು ಮಾಡಬಹುದಾದ ಶುಲ್ಕಗಳ ಪರಿಸ್ಕರಣೆ ಕೋರಿ, ಪ್ರತಿ ಮೂರು (3) ವರ್ಷಗಳಿಗೊಮ್ಮೆ ವ್ಯತ್ಯಾಸದಲ್ಲಿನ ಅನುಮೋದನೆ ಪಡೆಯಲು ಸಾಕ್ಷ್ಯ ಪುರಾವೆಗಳೊಂದಿಗೆ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಆಯೋಗದ ಮುಂದೆ ಅರ್ಜಿ ಸಲ್ಲಿಸಬೇಕಿರುತ್ತದೆ. |
| **ಟಿಪ್ಪಣಿ (1)** | ಮೇಲಿನ ಎಲ್ಲಾ ಸಂದರ್ಭಗಳಲ್ಲಿ, (ಅಂದರೆ, 3.2.3 (i), (ii), (iii) & (iv)), 3 ಕೆ.ಡಬ್ಲ್ಯೂ ಮೀರಿದ ಒಟ್ಟು ಹೊರೆಗಳಿಗಾಗಿ ಮಾತ್ರ, ಅಂತಹ ಹೆಚ್ಚುವರಿ ಹೊರೆಗಳಿಗೆ ಸೂಕ್ತವಾದ ಸ್ಲ್ಯಾಬ್ ದರಗಳಲ್ಲಿ ಖಂಡ 3.1.1 ರಂತೆಯೂ ಶುಲ್ಕಗಳನ್ನು ವಸೂಲು ಮಾಡುವುದು. ಪರ್ಯಾಯವಾಗಿ ಅರ್ಜಿದಾರರು ಸ್ವಯಂ ಕಾರ್ಯಗತಗೊಳಿಸುವಿಕೆಯ ಆಧಾರದ ಮೇಲೆ ವಿದ್ಯುತ್ ಮಾರ್ಗದ ಕೆಲಸವನ್ನು ಕೈಗೊಳ್ಳಬಹುದು. | ಉಳಿಸಿಕೊಳ್ಳಲಾಗಿದೆ. |
| **ಟಿಪ್ಪಣಿ (2)** | ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಳಗೊಂಡ ಬೆಂಗಳೂರು ಮಹಾನಗರ, ದಾಸರಹಳ್ಳಿ ನಗರ ನಗರಸಭೆ, ಯಲಹಂಕ ನಗರ ನಗರಸಭೆ, ಬ್ಯಾಟರಾಯನಪುರ ನಗರ ನಗರಸಭೆ, ಕೆಂಗೇರಿ ಪಟ್ಟಣ ನಗರಸಭೆ, ರಾಜರಾಜೇಶ್ವರಿ ನಗರ ನಗರಸಭೆ, ಕೃಷ್ಣರಾಜಪುರ ನಗರ ನಗರಸಭೆ, ಮಹದೇವಪುರ ನಗರ ನಗರಸಭೆ, ಬೊಮ್ಮನಹಳ್ಳಿ ನಗರ ನಗರಸಭೆ ಮತ್ತು ಬಿಡಿಎ ಪ್ರದೇಶಗಳ ಕಡೆಗೆ ಎಚ್ ಟಿ / ಎಲ್ ಟಿ ಭೂಗತ (ಯುಜಿ) ಕೇಬಲ್ / ಎಬಿಸಿ ವ್ಯವಸ್ಥೆಯನ್ನು ಅಳವಡಿಸುವಲ್ಲಿ 3 ಕೆ.ಡಬ್ಲ್ಯೂ ಗಿಂತ ಹೆಚ್ಚಿನ ಹೊರೆಗಳಿಗೆ, ಪ್ರತಿ ಕಿಲೋವ್ಯಾಟ್‌ಗೆ ಹೆಚ್ಚುವರಿಯಾಗಿ ರೂ.1000 ವನ್ನು ಮೇಲಿನ ಎಲ್ಲಾ ಪ್ರದೇಶಗಳಲ್ಲಿ ಸಂಗ್ರಹಿಸಬೇಕು. | ತೆಗೆದುಹಾಕಲಾಗಿದೆ. |

ಆಯೋಗದ ಆದೇಶದ ಮೇರೆಗೆ

**ಕಾರ್ಯದರ್ಶಿ**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ